ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

5

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 4/1/2021

## ಮೇಲ್ಮನೆ ಗೌರವ ಉಳಿಸಿಕೊಳ್ಳಿ

ಇತ್ತೀಚೆಗೆ ರಾಜ್ಯದ ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ದೇಶ ಮಟ್ಟದಲ್ಲಿ ರಾಜ್ಯಕ್ಕೆ ಅವಮಾನಕರ ಆದಂತಹುದು. ರಾಜ್ಯದ ಸದನದಲ್ಲಿ ಹಿರಿಯರ ಮನೆ, ಚಿಂತಕರ ಚಾವಡಿ ಎನಿಸಿದ ವಿಧಾನಪರಿಷತ್‌ನಲ್ಲಿ ಸಭಾಪತಿ ವಿರುದ್ಧ ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಸಂದರ್ಭ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರು ಕಿತ್ತಾಡಿ ಕೈ ಕೈ ಮಿಲಾಯಿಸಿ ಎಳೆದಾಡಿಕೊಂಡದ್ದು ನಾಚಿಕೆಗೇಡಿನ ಸಂಗತಿ. ಇವರುಗಳೇ ಈ ರೀತಿ ನಡೆದರೆ ರಾಜ್ಯದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಜನತೆಯ ನಂಬಿಕೆ ಹಾಳು ಮಾಡಿದಂತೆಯೇ ಸರಿ. ನಮ್ಮ ಪ್ರಜಾಪ್ರಭುತ್ವದ ಸಂಸದೀಯ ವ್ಯವಸ್ಥೆಯಲ್ಲಿ ವಿಧಾನಪರಿಷತ್ ಇರಲೇಬೇಕೆಂಬ ನಿಯಮವಿಲ್ಲ. ಆದರೂ ಕೆಲವೊಂದು ಉದ್ದೇಶಗಳಿಗಾಗಿ ಇದು ಇದೆ. ಎಷ್ಟೋ ವರುಷದ ಘನತೆಯ ಇತಿಹಾಸ ಇರುವ ಈ ವ್ಯವಸ್ಥೆಯಲ್ಲಿ ಇಂತಹ ಘಟನೆ ನಡೆದದ್ದು ಕೆಟ್ಟ ಬೆಳವಣಿಗೆ. ಇದು ಹೀಗೆ ಮುಂದುವರಿಯುವುದಕ್ಕಿಂತ ಪರಿಷತ್ತನ್ನು ವಿಸರ್ಜಿಸುವುದೇ ಒಳ್ಳೆಯದು. ಇನ್ನಾದರೂ ಸಂಸದರು ಮೇಲ್ಮನೆ ಗೌರವ ಉಳಿಸಿಕೊಳ್ಳಲಿ.

ಕೆ.ಶ್ರೀಧರ್ ಆಲೂರು

ಕುಂದಾಪುರ